ಉಳಿತಾಯದಿಂದ 0.50 ಲಕ್ಷ ಕೂಡಿಸಿ ಒಟ್ಟು ರೂ. 1.50 ಲಕ್ಷಕ್ಕೆ ಶಿಲೀಂಧ್ರ ನಾಶಕ "ಕ್ಯಾಲಕ್ಸಿನ್" ಔಷಧಿ ಏರೀದಿಸಿ ರೋಗಪೀಡಿತ ತೆಂಗಿನ ತೋಟದ ರೈತರಿಗೆ ಒದಗಿಸಲು (ಶೇ. 50 ರಿಯಾಯ್ತಿ) ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಏತನ್ಮಧ್ಯೆ ಜರೂರು ಆಗತ್ಯಕ್ಕೆ ತೋಟಗಾರಿಕೆ ನಿರ್ದೇಶನಾಲಯದ ಸಸ್ಯ ಸಂರಕ್ಷಣಾ ವಿಭಾಗದಲ್ಲಿ ಲಭ್ಯವಿರುವ 50 ಲೀ. ಔಷಧಿಯನ್ನು ಕಳುಹಿಸಲಾಗುವುದು. ಕಪ್ಪುತಲೆ ಹುಳು ಬಾಧೆಗೆ ಸಂಬಂಧಿಸಿದಂತೆ ತಾಲ್ಲೂಕಿನಲ್ಲಿ ಕೀಟನಾಶಕದ ಉಪಚಾರದ ಕ್ರಮ ಕೈಗೊಳ್ಳಲಾಗುತ್ತಿದೆ. ಮುನ್ನೆಚ್ಚರಿಕೆ ಕ್ರಮಗಳನ್ನು ಸಹ ಕೈಗೊಳ್ಳಲಾಗುತ್ತಿದೆ.

ಇ) ಈ ರೋಗ ಹತೋಟಿಗೆ ಮೇಲೆ ಹೇಳಿದ ರೀತಿ ಔಷಧಿ ಒದಗಿಸುವುದನ್ನು ಹೊರತುಪಡಿಸಿದರೆ ನಾಶವಾದ ಮರಗಳಿಗೆ ಪರಿಹಾರ ಒದಗಿಸುವ ಯೋಜನೆ 1995-96 ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿರುವುದಿಲ್ಲ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನು ಒಪ್ಪಿಸುವುದು

ಶ್ರೀ ಕೆ. ಶರಣಪ್ಪ (ಹೆಚ್. ಎಸ್. ನಂಜೇಗೌಡರ ಪರವಾಗಿ) :- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಸದಸ್ಯನಾದ ನಾನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ 8 ನೇ ವರದಿ, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಒಂಬತ್ತನೇ ವರದಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ 10 ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಕೆ. ಎಂ. ಕೃಷ್ಣಮೂರ್ತಿ :- ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಅಸಿಸ್ಟಂಟ್ ಲೈನ್ ಮ್ಯಾನ್ ಆಗಿದ್ದ ಶ್ರೀ ಹೊನ್ನಾ ಅವರು ಸೇವಾ ನಿರತನಾಗಿದ್ದಾಗ ನಿಧನ ಹೊಂದಿದ ನಂತರ ಅವರ ಸಂಬಂಧಿಕರಿಗೆ ಹುದ್ದೆ ಕೊಡುವ ಬಗ್ಗೆ ಅರ್ಜಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಪಡೆದು ಪ್ರಸ್ತಾಪಿಸಿದ ವಿಷಯಗಳು.

ವಿಷಯ :- ಬೇತಮಂಗಲದ ಜ್ಞಾನ ಜ್ಯೋತಿ ಅಂಧ ಮತ್ತು ಕಿವುಡ ಮಕ್ಕಳ ಶಾಲೆ ಕುರಿತು.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಬಹಳ ಮುಖ್ಯವಾದ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಬೇತಮಂಗಲದಲ್ಲಿ 'ಜ್ಞಾನಜ್ಯೋತಿ ಅಂಧ ಮತ್ತು ಕಿವುಡ ಮಕ್ಕಳ' ಒಂದು ಶಾಲೆ ಇದೆ. ಇಲ್ಲಿ ಎಂಥಹ ಧಾರುಣವಾದ ಘಟನೆ ನಡೆದಿದೆ ಎಂದರೆ, ಆ ಶಾಲೆಯ ಶಿಕ್ಷಕಿ ಒಬ್ಬಳ ಕಿರುಕುಳವನ್ನು ತಾಳಲಾರದೆ ಈ ಕಿವುಡ ಮತ್ತು ಅಂಧ ಮಕ್ಕಳು ಅಲ್ಲಿಂದ ಪರಾರಿಯಾಗಿದ್ದಾರೆ. ಇವರು ಪರಾರಿಯಾಗಿರುವ ವಿಷಯ ಮಕ್ಕಳ ಸಂಬಂಧಿ ಕರಿಗಾಗಲೀ ಅಥವಾ ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಗಮನಕ್ಕೆ ನಾಲ್ಕೈದು ದಿವಸ ಗಳಾದರೂ ಬಂದಿರಲಿಲ್ಲ. ಈ ಮಕ್ಕಳು ಕೋಲಾರ ಪಟ್ಟಣದ ಬಜಾರ್ ಸ್ಟ್ರೀಟ್‌ಗಳಲ್ಲಿ ಓಡಾ ಡುತ್ತಿದ್ದಾಗ ಅವರುಗಳನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾರೆ. ಕಿವುಡ ಮತ್ತು ಅಂಧ ಮಕ್ಕಳಿಗೆ ಸರಿಯಾದ ಊಟ, ಉಪಚಾರ ಮಾಡದೆ ಅಲ್ಲಿ ಬಹಳ ಅವ್ಯವಸ್ಥೆ ಯಾಗಿದೆ. ಸರ್ಕಾರದಿಂದ ಅಲ್ಲಿಗೆ ಕೊಡುತ್ತಿದ್ದ ಹಣವನ್ನು ದುರುಪಯೋಗ ಮಾಡಿ, ಅಲ್ಲಿರತಕ್ಕಂಥ ಮಕ್ಕಳನ್ನು ಪಶುಗಳಿಗಿಂತ ಹೀನವಾಗಿ ನೋಡುತ್ತಿದ್ದಾರೆ. ಅಲ್ಲಿ ಅವರು ಕೊಡುವ ಕಿರುಕುಳ ತಾಳಲಾರದೆ ಮಕ್ಕಳು ರಾತ್ರೋ ರಾತ್ರಿ ಓಡಿಹೋಗಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ; ಗಮನಕ್ಕೆ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದೆ ಎಂದು ತಿಳಿಯಬಯಸುತ್ತೇನೆ. ಈ ಸ್ಕೂಲನ್ನು ಯಾರು ನಡೆಸುತ್ತಿದ್ದಾರೋ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ಶಿಕ್ಷಕಿ ಮೇಲೆ ಕಾನೂನು ಬದ್ಧವಾದ ಕ್ರಮ ತೆಗೆದುಕೊಂಡು ಅರೆಸ್ಟ ಮಾಡಬೇಕು ಹಾಗೂ ಆ ಮ್ಯಾನೇಜ್‌ಮೆಂಟಿನವರ ಮೇಲೂ ಕ್ರಮ ತೆಗೆದುಕೊಂಡು ಅಲ್ಲಿರತಕ್ಕಂಥ ಮಕ್ಕಳಿಗೆ ರಕ್ಷಣೆ ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

12.50 ಪಿ. ಎಂ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ :- ಇದು ಸರಕಾರದ ಗಮನಕ್ಕೆ ಬಂದಿಲ್ಲ. ಬೆಳಿಗ್ಗೆ ಪತ್ರಿಕೆಗಳಲ್ಲಿ ನಾನೂ ಕೂಡ ನೋಡಿದ್ದೇನೆ. ಈ ಬಗ್ಗೆ ತತ್‌ಕ್ಷಣವೇ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ರೀತಿಯಾಗುತ್ತಿರುವುದು ಬಹಳ ಅನ್ಯಾಯ. ಈ ರೀತಿಯಾಗಿ ಬೇರೆ ಎಲ್ಲಿಯೂ ಆಗಿಲ್ಲ. ಇದೇ ಪ್ರಥಮ ಬಾರಿ ಆಗಿದೆ. ಮಾನ್ಯ ಸದಸ್ಯರುಗಳು ಹೇಳಿದ ವಿಚಾರಗಳ ಬಗ್ಗೆ ತತ್‌ಕ್ಷಣವೇ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :- ನಾನು ಈಗಲೇ ವಿವರಗಳನ್ನು ಕೊಡಿ ಎಂದು ಕೇಳುತ್ತಾ ಇಲ್ಲ. ನಾಳೆ ಸಭೆ ಮುಗಿಯುವುದರೊಳಗಾಗಿ ಅವರು ಅಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಅದನ್ನು ತಿಳಿಸಬೇಕು. ಸದನಕ್ಕೆ ವಿಷಯವು ಗೊತ್ತಾಗಬೇಕೆಂದು ತಮ್ಮಲ್ಲಿ ಕೇಳುತ್ತಾ ಇದ್ದೇನೆ. ಇವೊತ್ತೇ ತಾವು ಕ್ರಮತೆಗೆದುಕೊಳ್ಳಿ, ಉತ್ತರ ಕೊಡಿ ಎಂದು ಕೇಳುತ್ತಾ ಇಲ್ಲ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ :- ಮಾನ್ಯ ಅಧ್ಯಕ್ಷರೇ, ನಾನು ಇವೊತ್ತು ಬೆಳಿಗ್ಗೆ ಫೋನ್‌ನಲ್ಲಿ ಹೇಳಿದ್ದೇನೆ. ಅಲ್ಲಿ ಏನೇನು ನಡೆದಿದೆ, ಆ ಬಗ್ಗೆ ತತ್‌ಕ್ಷಣ ವರದಿಯನ್ನು ಕಳುಹಿಸಿ ಎಂದು ಹೇಳಿದ್ದೇನೆ. ಬಹುಶಃ ಅದು ನಾಳೆಯೊಳಗೆ ಬರುತ್ತದೆ.

ಶ್ರೀ ಜಿ. ವಿ. ರಾಮರೆಡ್ಡಿ :- ಸದನಕ್ಕೆ ವಿವರಗಳನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :- ಸಚಿವೆಯರು ತಿಳಿಸುತ್ತಾರೆ.

(2) ಯೂರಿಯಾ ಗೊಬ್ಬರದ ಆಭಾವ ಕುರಿತು ಕೃಷಿ ಮಂತ್ರಿಗಳಿಂದ ಹೇಳಿಕೆಗೆ ಒತ್ತಾಯ.